ಅ.ದಾ.126/2019 ಪಿಡಬ್ಲ್ಯು-2

ದಿನಾಂಕಃ 31.08.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಶ್ರೀ ಹೆಚ್.ಎಸ್. ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯನ್ನು ಲಿಖಿತವಾಗಿ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯ ವಾಗಿರುತ್ತದೆ. ಅದರ ಪ್ರತೀ ಪುಟಕ್ಕೂ ನಾನೇ ರುಜು ಮಾಡಿರುತ್ತೇನೆ.

ಸಾಕ್ಷಿಯು ನಿಪಿ-15 ರ ಜುಬಾನೆ ಹಿಸ್ಸೆಯಲ್ಲಿ ಸಾಕ್ಷಿಗಳು ಎಂದು ಇರುವ ಸಹಿಗಳ ಪೈಕಿ ಒಂದು ಸಹಿಯನ್ನು ತನ್ನ ತಂದೆ ಎಂದು ಗುರುತಿಸಿದ್ದು, ಸದರಿ ಸಹಿಯನ್ನು ಪ್ರತಿವಾದಿಗಳ ಪರ ವಕೀಲರ ತಕರಾರಿಗೆ ಒಳಪಟ್ಟು, ನಿಪಿ-15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-21 ರ ದಾಖಲೆಯನ್ನು ನೋಡಿ ಅದು ತನ್ನ ತಂದೆಯ ಮರಣ ಪ್ರಮಾಣ ಪತ್ರ ಎಂದು ಹಾಗೂ ನಿಪಿ-22 ರ ದಾಖಲೆಯನ್ನು ನೋಡಿ ಅದು ತಮ್ಮ ಕುಟುಂಬದ ವಂಶವೃಕ್ಷ ಪ್ರಮಾಣ ಪತ್ರ ಎಂದು ಗುರುತಿಸುತ್ತಾರೆ.

Note:- ನಿಪಿ-15 ರಲ್ಲಿ ಸಾಕ್ಷಿಗಳು ಎಂದು ಇರುವ ಸಹಿಗಳ ಕೆಳಗೆ ಹೆಸರು ನಮೂದಿಸಲಾಗಿರದ ಕಾರಣ ಸಾಕ್ಷಿಯು ಗುರುತಿಸಿರುವ ಸಹಿಯನ್ನು ನಿಶಾನೆಯಾಗಿ ಗುರುತಿಸಬಾರದೆಂದು ಪ್ರತಿವಾದಿಗಳು ಪರ ವಕೀಲರು ತಕರಾರು ಸಲ್ಲಿಸಿರುತ್ತಾರೆ.

**ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.